# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

**ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ**

**'ವಿಜ್ಞಾನ ಭವನ' 24/2, 21ನೇ ಮುಖ್ಯ ರಸ್ತೆ, ಬನಶಂಕರಿ, 2ನೇ ಹಂತ, ಬೆಂಗಳೂರು**

**ಜಾಲತಾಣ : www.kstacademy.org**

## ವಾರ್ಷಿಕ ವರದಿ 2013-'14

ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗಸಂಸ್ಥೆಯಾದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು (ಕವಿತಂಅ) ಖ್ಯಾತ ಬಾಹ್ಯಾಕಾಶ ವಿಜ್ಞಾನಿ ಮತ್ತು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ನಿವೃತ್ತ ಅಧ್ಯಕ್ಷರಾದ ಪ್ರೊ. ಯು. ಆರ್. ರಾವ್‌ರವರ ಅಧ್ಯಕ್ಷತೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಪ್ರೌಢಶಾಲೆಯಿಂದ ವಿಶ್ವವಿದ್ಯಾನಿಲಯದವರೆಗಿನ ವಿವಿಧ ಶೈಕ್ಷಣಿಕ ಹಂತಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಅರಿವು ಮೂಡಿಸುವ ಹಾಗೂ ವಿಜ್ಞಾನ ಪ್ರಸರಣಕ್ಕೆ ಪೂರಕವಾಗುವ ಕೆಳಕಂಡ ಕಾರ್ಯಕ್ರಮಗಳನ್ನು 2013-14ನೇ ಸಾಲಿನಲ್ಲೂ ಸಹ ರಾಜ್ಯಾದ್ಯಂತ ಬಹಳ ಯಶಸ್ವಿಯಾಗಿ ಆಯೋಜಿಸಿದೆ:

### 1. ವಿಜ್ಞಾನ ಲೋಕ ಸಂಚಿಕೆ ಪ್ರಕಟಣೆ

ಅಕಾಡೆಮಿಯು "ವಿಜ್ಞಾನ ಲೋಕ" ತ್ರೈಮಾಸಿಕ ಮಾಸಿಕ ಸಂಚಿಕೆಯನ್ನು 2007 ರಿಂದ ಪ್ರಕಟಿಸುತ್ತಿದೆ. 2013-14ನೇ ಸಾಲಿನಿಂದ ದ್ವೈಮಾಸಿಕ 6 ಸಂಚಿಕೆಗಳನ್ನು ಪ್ರಕಟಿಸಿ (2013ರ ಏಪ್ರಿಲ್, ಜೂನ್, ಆಗಸ್ಟ್, ಅಕ್ಟೋಬರ್ ಹಾಗೂ 2014ರ ಜನವರಿ ಮತ್ತು ಮಾರ್ಚ್ ಮಾಹೆಗಳಲ್ಲಿ ಪ್ರತಿ ಸಂಚಿಕೆಯ ತಲಾ 2000 ಪ್ರತಿಗಳನ್ನು ಮುದ್ರಿಸಿ), ರಾಜ್ಯದ ವಿವಿಧ ವಿಜ್ಞಾನ ಪದವಿ ಪೂರ್ವ ಮತ್ತು ಪದವಿ ಕಾಲೇಜುಗಳಿಗೆ, ವಿಜ್ಞಾನ ಕೇಂದ್ರಗಳಿಗೆ, ಗ್ರಂಥಾಲಯಗಳಿಗೆ ಹಾಗೂ ಇನ್ನಿತರೆ ಸಂಸ್ಥೆಗಳಿಗೆ ಉಚಿತವಾಗಿ ಕಳುಹಿಸಿ ಕೊಡಲಾಗಿದೆ.

### 2. ಶಿಕ್ಷಕರ ಪುನಶ್ಚೇತನಾ ಕಾರ್ಯಾಗಾರ

ಪ್ರೌಢಶಾಲಾ ಶಿಕ್ಷಕರಿಗೆ ತರಬೇತಿ ಕಾರ್ಯಾಗಾರಗಳನ್ನು ವಿಜ್ಞಾನ ಮತ್ತು ಗಣಿತ ವಿಷಯಗಳಲ್ಲಿ ನಾಲ್ಕು ಸಂಸ್ಥೆಗಳ ಸಹಯೋಗದೊಂದಿಗೆ ಯಶಸ್ವಿಯಾಗಿ ಆಯೋಜಿಸಲಾಗಿದೆ. ಅವುಗಳೆಂದರೆ : (1) ವಿವೇಕಾನಂದ ಯೂತ್ ಮೂವ್‌ಮೆಂಟ್, ಹೆಚ್.ಡಿ. ಕೋಟೆ, ಮೈಸೂರು, (2) ಸ್ವಾಮಿ ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ, ಬಿಳಿಗಿರಿರಂಗನ ಬೆಟ್ಟ, ಚಾಮರಾಜನಗರ (3) ಪ್ರಾದೇಶಿಕ ವಿಜ್ಞಾನ ಕೇಂದ್ರ, ಧಾರವಾಡ ಹಾಗೂ (4) ಬಾಪೂಜಿ ಸ್ವತಂತ್ರ ಪದವಿ ಪೂರ್ವ ಕಾಲೇಜು, ಬಡಗಂಡಿ, ಬೀಳಗಿ ತಾಲ್ಲೂಕು, ಬಾಗಲಕೋಟೆ.

### 3. ವಿಜ್ಞಾನ ಪದವಿ ವಿದ್ಯಾರ್ಥಿಗಳಿಗೆ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಶಿಷ್ಯವೇತನ

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಶಿಷ್ಯವೇತನವನ್ನು ಮಾಹೆಯಾನ ರೂ. 750/- ಗಳಂತೆ (10 ತಿಂಗಳವರೆಗೆ ರೂ. 7,500/- ಗಳು) ಬೆಂಗಳೂರು, ಕುವೆಂಪು, ಮಂಗಳೂರು, ಮೈಸೂರು, ತುಮಕೂರು, ದಾವಣಗೆರೆ, ಕರ್ನಾಟಕ, ಗುಲ್ಬರ್ಗಾ, ರಾಣಿಚೆನ್ನಮ್ಮ,

ಶ್ರೀ ವಿಜಯನಗರ ಕೃಷ್ಣದೇವರಾಯ ಹಾಗೂ ಕ್ರೈಸ್ಟ್ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿಜ್ಞಾನ ಪದವಿ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ. 2013-14ನೇ ಸಾಲಿನಲ್ಲಿ ಒಟ್ಟು 425 ಶಿಷ್ಯವೇತನಗಳನ್ನು (ಪ್ರತಿ ವಿಶ್ವವಿದ್ಯಾಲಯಕ್ಕೆ 20 ಶಿಷ್ಯವೇತನಗಳಂತೆ ಪ್ರಥಮ ಬಿ.ಎಸ್ಸಿ – 194; ದ್ವಿತೀಯ ಬಿ.ಎಸ್ಸಿ –133 & ತೃತೀಯ ಬಿ.ಎಸ್ಸಿ – 98) ನೀಡಲಾಗಿದೆ.

## 4. ವಿಶೇಷ ಅಭಿವೃದ್ಧಿ ಯೋಜನೆಯಡಿ (SDP) ಅಕಾಡಮಿ ಶಿಷ್ಯವೇತನ

ಪ್ರಾದೇಶಿಕ ಅಸಮತೋಲನಕ್ಕೆ ಸಂಬಂಧಿಸಿದ ಡಾ. ಡಿ. ಎಂ. ನಂಜುಂಡಪ್ಪ ಸಮಿತಿಯು ಗುರುತಿಸಿರುವ ಹಿಂದುಳಿದ ತಾಲ್ಲೂಕುಗಳಲ್ಲಿ ವಿಜ್ಞಾನ ಪದವಿಯಲ್ಲಿ ವ್ಯಾಸಂಗಮಾಡುತ್ತಿರುವ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಲು ಶಿಷ್ಯವೇತನವನ್ನು ಮಾಹೆಯಾನ ರೂ. 750/- ರಂತೆ (10 ತಿಂಗಳವರೆಗೆ ರೂ. 7,500/- ಪ್ರತಿ ವಿದ್ಯಾರ್ಥಿಗೆ) ಗುಲ್ಬರ್ಗ (213 ಶಿಷ್ಯವೇತನಗಳು); ಬೆಳಗಾಂ (300 ಶಿಷ್ಯವೇತನಗಳು); ಬೆಂಗಳೂರು (86 ಶಿಷ್ಯವೇತನಗಳು) ಹಾಗೂ ಮೈಸೂರು (185 ಶಿಷ್ಯವೇತನಗಳು) ಜಿಲ್ಲೆಗಳ ಒಟ್ಟು 784 ವಿದ್ಯಾರ್ಥಿಗಳಿಗೆ ವಿತರಿಸಲಾಗಿದೆ.

## 5. ಸ್ನಾತಕೋತ್ತರ ವಿಜ್ಞಾನ ವಿದ್ಯಾರ್ಥಿಗಳಿಗೆ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಶಿಷ್ಯವೇತನ

ಸ್ನಾತಕೋತ್ತರ ವಿಜ್ಞಾನ ವಿದ್ಯಾರ್ಥಿಗಳಿಗೆ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಶಿಷ್ಯವೇತನವನ್ನು ಮಾಹೆಯಾನ ರೂ. 1250/- ಗಳಂತೆ (10 ತಿಂಗಳವರೆಗೆ ರೂ. 12,500/-) ಒಂದು ವಿಶ್ವವಿದ್ಯಾನಿಲಯಕ್ಕೆ 10 ಶಿಷ್ಯವೇತನವನ್ನು ಪ್ರತಿ ಮೂಲ ವಿಜ್ಞಾನ ವಿಭಾಗಕ್ಕೆ 2 ರಂತೆ ಸ್ನಾತಕೋತ್ತರ ಪದವಿಯ ಎರಡು ವರ್ಷಗಳ ಅವಧಿಯವರೆಗೆ ನೀಡಲಾಗುತ್ತಿದೆ. ಒಟ್ಟು 189 ಸ್ನಾತಕೋತ್ತರ ಅರ್ಹ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು (ಪ್ರಥಮ ವರ್ಷ - 96 & ದ್ವಿತೀಯ ವರ್ಷ 93) ಪ್ರಸಕ್ತ ಸಾಲಿನಲ್ಲಿ ವಿತರಿಸಲಾಗಿದೆ.

## 6. ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮ

ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ವಿಜ್ಞಾನ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮಗಳನ್ನು (i) ಬೆಂಗಳೂರು ವಿಶ್ವವಿದ್ಯಾಲಯ (ಭೌತ ವಿಜ್ಞಾನ); (ii) ಮೈಸೂರು ವಿಶ್ವವಿದ್ಯಾಲಯ (ಗಣಿತ); (iii) ಮಂಗಳೂರು ವಿಶ್ವವಿದ್ಯಾಲಯ (ಪ್ರಾಣಿ ವಿಜ್ಞಾನ); (iv) ಗುಲ್ಬರ್ಗಾ ವಿಶ್ವವಿದ್ಯಾಲಯ (ಸಸ್ಯ ವಿಜ್ಞಾನ); (v) ಕರ್ನಾಟಕ ವಿಶ್ವವಿದ್ಯಾನಿಲಯ (ರಸಾಯನ ವಿಜ್ಞಾನ) ಹಾಗೂ (vi) ಕೆ.ಎಸ್. ಹೆಗಡೆ ಮೆಡಿಕಲ್ ಅಕಾಡೆಮಿ, ದೇರಲಕಟ್ಟೆ (ನ್ಯಾನೊ ಮೆಡಿಸನ್) ವಿಷಯಗಳಲ್ಲಿ ಯಶಸ್ವಿಯಾಗಿ ನಡೆಸಲಾಯಿತು.

ಅಲ್ಲದೇ, ವಿಜ್ಞಾನ ವಿಶೇಷ ಕಾರ್ಯಾಗಾರಗಳನ್ನು (i) ಶ್ರೀ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾನಿಲಯ (ಭೌತ ವಿಜ್ಞಾನ); (ii) ಕುವೆಂಪು ವಿಶ್ವವಿದ್ಯಾನಿಲಯ (ಭೂ ವಿಜ್ಞಾನ); (iii) ಮೀನುಗಾರಿಕಾ ಮಹಾವಿದ್ಯಾನಿಲಯ (ಮೀನುಗಾರಿಕಾ ವಿಜ್ಞಾನ); (iv) ತೋಟಗಾರಿಕಾ ವಿಶ್ವವಿದ್ಯಾನಿಲಯ (ಒಣ ಭೂಮಿ ತೋಟಗಾರಿಕೆ); (v) ತುಮಕೂರು ವಿಶ್ವವಿದ್ಯಾನಿಲಯ (ಭೌತ ವಿಜ್ಞಾನ); (vi) ಬಾಪೂಜಿ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ, ದಾವಣಗೆರೆ (ಜೈವಿಕ ತಂತ್ರಜ್ಞಾನ); (vii) ಅರಣ್ಯ ಮಹಾವಿದ್ಯಾಲಯ, ಪೊನ್ನಂಪೇಟೆ (ಅರಣ್ಯ ವಿಜ್ಞಾನ); (viii) ಕರ್ನಾಟಕ ರಾಜ್ಯ

ಮಹಿಳಾ ವಿಶ್ವವಿದ್ಯಾನಿಲಯ, ಬಿಜಾಪುರ (ಕಂಪ್ಯೂಟರ್ ಸೈನ್ಸ್); (ix) ಯು.ವಿ.ಸಿ.ಇ ಕಾಲೇಜು, ಬೆಂಗಳೂರು (ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್) ಹಾಗೂ (x) ಕ್ರೈಸ್ಟ್ ವಿಶ್ವವಿದ್ಯಾನಿಲಯ (ರಸಾಯನ ವಿಜ್ಞಾನ) ಯಶಸ್ವಿಯಾಗಿ ನಡೆಸಲಾಯಿತು.

## 7. ರಾಷ್ಟ್ರೀಯ ವಿಜ್ಞಾನ ದಿನಾಚರಣೆ

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ವತಿಯಿಂದ ರಾಷ್ಟ್ರೀಯ ವಿಜ್ಞಾನ ದಿನವನ್ನು 2013-14ನೇ ಸಾಲಿನಲ್ಲಿ **ಬೆಂಗಳೂರು ಮತ್ತು ರಾಜ್ಯದ 15 ವಿವಿಧ ಜಿಲ್ಲೆಗಳಲ್ಲಿ "ವೈಜ್ಞಾನಿಕ ಮನೋಭಾವನೆಯನ್ನು ಉತ್ತೇಜಿಸುವುದು** (Fostering Scientific Temper)" ಎಂಬ ಕೇಂದ್ರ ವಿಷಯದಡಿ ಪ್ರಥಮ ದರ್ಜೆ ವಿಜ್ಞಾನ ಕಾಲೇಜು, ವಿಜ್ಞಾನ ಕೇಂದ್ರಗಳು ಹಾಗೂ ಸಂಘ-ಸಂಸ್ಥೆಗಳ ಸಹಯೋಗದೊಂದಿಗೆ ಆಯೋಜಿಸಲಾಯಿತು.

## 8. ವಿಜ್ಞಾನ & ತಂತ್ರಜ್ಞಾನ, ಕೃಷಿ ಮತ್ತು ವೈದ್ಯಕೀಯ ವಿಜ್ಞಾನ ಕ್ಷೇತ್ರಗಳ ಲೇಖಕರಿಗೆ ಪ್ರಶಸ್ತಿ

2013-14ನೇ ಸಾಲಿನಲ್ಲಿ ವಿಜ್ಞಾನ & ತಂತ್ರಜ್ಞಾನ, ಕೃಷಿ ಮತ್ತು ವೈದ್ಯಕೀಯ ವಿಜ್ಞಾನ ಕ್ಷೇತ್ರಗಳಿಗೆ ಸಂಬಂಧಿಸಿದ ಕಡಿಮೆ ಪುಸಕ್ತಗಳು ಸ್ವೀಕೃತವಾಗಿರುವುದರಿಂದ ಪ್ರಸಕ್ತ ಸಾಲಿನಲ್ಲಿ ಅಕಾಡೆಮಿ ಶ್ರೇಷ್ಠ ಲೇಖಕ ಪ್ರಶಸ್ತಿಗೆ ಪುಸಕ್ತಗಳನ್ನು ಆಯ್ಕೆ ಮಾಡದಿರಲು ನಿರ್ಧರಿಸಲಾಯಿತು.

## 9. ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಆರನೇ ಸಮ್ಮೇಳನ

ಕರ್ನಾಟಕ ವಿಜ್ಞಾನ ತಂತ್ರಜ್ಞಾನ ಅಕಾಡೆಮಿಯ ಆರನೇ ಸಮ್ಮೇಳನವನ್ನು ಬೆಂಗಳೂರಿನ ಕ್ರೈಸ್ಟ್ ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ 2013ರ ಡಿಸೆಂಬರ್ 20 ಮತ್ತು 21 ರಂದು **"ಆವಿಷ್ಕಾರಕ ಸಂಶೋಧನೆ ಮತ್ತು ಅಭಿವೃದ್ಧಿ ಉತ್ತೇಜನಕ್ಕೆ ವಿಜ್ಞಾನ ಮತ್ತು ತಂತ್ರಜ್ಞಾನ"** (Science and Technology for Promoting Innovative Research and Development) ಎಂಬ ಕೇಂದ್ರ ವಿಷಯದಡಿ ಆಯೋಜಿಸಲಾಯಿತು. ಈ ಸಮ್ಮೇಳನದ ತಾಂತ್ರಿಕ ಗೋಷ್ಠಿಯಲ್ಲಿ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಿಗೆ ಸಂಬಂಧಿಸಿದ ವಿಷಯಗಳ ಮೇಲೆ ಖ್ಯಾತ ವಿಜ್ಞಾನಿಗಳು, ವಿಷಯ ತಜ್ಞರು ಮತ್ತು ಪರಿಣತರಿಂದ ಹತ್ತು ಪಾಂಡಿತ್ಯ ಪೂರ್ಣ ಉಪನ್ಯಾಸಗಳನ್ನು ಏರ್ಪಡಿಸಲಾಗಿತ್ತು.

ಈ ಸಮ್ಮೇಳನದಲ್ಲಿ ಜೈವಿಕ ತಂತ್ರಜ್ಞಾನ ಕ್ಷೇತ್ರದ ಹಿರಿಯ ವಿಜ್ಞಾನಿ ಮತ್ತು ಹೈದರಾಬಾದಿನ ಸೆಂಟರ್ ಫಾರ್ ಸೆಲ್ಯೂಲರ್ ಎಂಡ್ ಮಾಲಿಕ್ಯೂಲರ್ ಬಯಾಲಜಿಯ ನಿವೃತ್ತ ನಿರ್ದೇಶಕರು ಹಾಗೂ ಪ್ರಸ್ತುತ ಬೆಂಗಳೂರಿನ ಸೆಂಟರ್ ಫಾರ್ ಹ್ಯೂಮನ್ ಜೆನೆಟಿಕ್ಸ್‌ನ ಗೌರವ ನಿರ್ದೇಶಕರು ಆದ ಪ್ರೊ. ಹೆಚ್. ಶರತ್‌ಚಂದ್ರರವರಿಗೆ **ಅಕಾಡೆಮಿಯ ಜೀವಮಾನ ಸಾಧನೆ ಪ್ರಶಸ್ತಿಯನ್ನು** ನೀಡಿ ಗೌರವಿಸಲಾಯಿತು.

ರಾಜ್ಯದ ವಿವಿಧ ವಿಶ್ವವಿದ್ಯಾನಿಲಯ ಹಾಗೂ ಕಾಲೇಜುಗಳ ಪ್ರತಿನಿಧಿಗಳು/ಸಂಶೋಧನಾ ವಿದ್ಯಾರ್ಥಿಗಳು, ಉಪನ್ಯಾಸಕರು, ಪ್ರಾಧ್ಯಾಪಕರು, ವಿಜ್ಞಾನಿಗಳು, ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳು, ಸರ್ಕಾರೇತರ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ಆಸಕ್ತ ಸಾರ್ವಜನಿಕರನ್ನು ಒಳಗೊಂಡ ಸುಮಾರು 1200 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಅಕಾಡೆಮಿಯು ವೈಜ್ಞಾನಿಕ ಸಂಶೋಧನೆಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಏರ್ಪಡಿಸಿದ್ದ ಪ್ರಾತ್ಯಕ್ಷಿಕೆಗಳ ಪ್ರದರ್ಶನದಲ್ಲಿ 150 ಕ್ಕೂ ಹೆಚ್ಚು ಪ್ರಾತ್ಯಕ್ಷಿಕೆಗಳನ್ನು ಪ್ರದರ್ಶಿಸಲಾಯಿತು. ಅವುಗಳಲ್ಲಿ 3 ಅತ್ಯುತ್ತಮವಾದ ಪ್ರಾತ್ಯಕ್ಷಿಕೆಗಳನ್ನು ಆಯ್ಕೆ ಮಾಡಿ ಪ್ರಥಮ, ದ್ವಿತೀಯ ಮತ್ತು ತೃತೀಯ

ಬಹುಮಾನಗಳನ್ನು ನೀಡಿ ಪ್ರೋತ್ಸಾಹಿಸಲಾಯಿತು. ಈ ಸಂದರ್ಭದಲ್ಲಿ ಆಯ್ದ ಪ್ರಾತ್ಯಕ್ಷಿಕೆಗಳ ಸಾರಾಂಶವನ್ನು ಹೊಂದಿದ ಪುಸ್ತಕವನ್ನು ಹೊರತರಲಾಯಿತು.

## 10. ವಿಜ್ಞಾನ ಮತ್ತು ಇಂಜಿನಿಯರಿಂಗ್ ಪದವಿ ವಿದ್ಯಾರ್ಥಿಗಳಿಗೆ ಮುಕ್ತ ಉಪನ್ಯಾಸ ಮಾಲೆ ಕಾರ್ಯಕ್ರಮ

ವಿಜ್ಞಾನ ಮತ್ತು ಇಂಜಿನಿಯರಿಂಗ್ ಪದವಿ ವಿದ್ಯಾರ್ಥಿಗಳಿಗೆ ಒಟ್ಟು 9 ಮುಕ್ತ ಉಪನ್ಯಾಸ ಮಾಲೆ ಕಾರ್ಯಕ್ರಮಗಳನ್ನು ರಾಜ್ಯದ ವಿವಿಧೆಡೆ ವಿಜ್ಞಾನ ಹಾಗೂ ಇಂಜಿನಿಯರಿಂಗ್ ಕಾಲೇಜುಗಳ ಸಹಯೋಗದೊಂದಿಗೆ ಯಶಸ್ವಿಯಾಗಿ ಆಯೋಜಿಸಲಾಯಿತು.

## 11. ರಾಷ್ಟ್ರೀಯ & ಅಂತಾರಾಷ್ಟ್ರೀಯ ಮಹತ್ವದ ದಿನಗಳ ಆಚರಣೆ

"ವಿಶ್ವ ಶಾಂತಿ ಮತ್ತು ಅಭಿವೃದ್ಧಿಗಾಗಿ ವಿಜ್ಞಾನ" ಎಂಬ ಅಂತಾರಾಷ್ಟ್ರೀಯ ಮಹತ್ವದ ದಿನವನ್ನು ಬೆಂಗಳೂರಿನ ದಯಾನಂದ ಸಾಗರ್ ಶಿಕ್ಷಣ ಸಂಸ್ಥೆಯ ಸಹಯೋಗದೊಂದಿಗೆ 5ನೇ ಮಾರ್ಚ್ 2014ರಂದು ಆಯೋಜಿಸಲಾಯಿತು.

## 12. ವಿಜ್ಞಾನ ಮತ್ತು ಇಂಜಿನಿಯರಿಂಗ್ ಅಧ್ಯಾಪಕರುಗಳಿಗೆ ಕಾರ್ಯಾಗಾರ

ವಿಜ್ಞಾನ ಮತ್ತು ಇಂಜಿನಿಯರಿಂಗ್ ಪದವಿ ಕಾಲೇಜುಗಳ ಅಧ್ಯಾಪಕರುಗಳಿಗೆ ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆಯಲ್ಲಿ ಜಿಯೋಇನ್ಫಾರ್ಮ್ಯಾಟಿಕ್ಸ್ ತಂತ್ರಜ್ಞಾನದ ಬಳಕೆಯ ಬಗ್ಗೆ 5 ಕಾರ್ಯಾಗಾರಗಳನ್ನು, ಸಿಗ್ನಲ್ ಪ್ರೋಸೆಸಿಂಗ್ ಹಾಗೂ ಡಿಜಿಟಲ್ ಇಮೇಜ್ ಪ್ರೋಸೆಸಿಂಗ್ ಸಂಬಂಧಿಸಿದ ತಲಾ ಒಂದೊಂದು ಕಾರ್ಯಾಗಾರಗಳನ್ನು ಅಕಾಡೆಮಿಯ ಕಛೇರಿ ಹಾಗೂ ವಿವಿಧ ಶಿಕ್ಷಣ ಸಂಸ್ಥೆಗಳ ಸಹಯೋಗದೊಂದಿಗೆ ಯಶಸ್ವಿಯಾಗಿ ಆಯೋಜಿಲಾಯಿತು.

## 13. ಅಲ್ಪ ಮೊತ್ತದ ಅನುದಾನ

ವಿವಿಧ ಶೈಕ್ಷಣಿಕ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು ಹಾಗೂ ಇತರೆ ಸಂಘ ಸಂಸ್ಥೆಗಳು ಈ ಕಾರ್ಯಕ್ರಮದಡಿ ಕಾರ್ಯಾಗಾರ, ಸಮ್ಮೇಳನ, ವಿಚಾರಗೋಷ್ಠಿ ಇತ್ಯಾದಿಗಳ ಆಯೋಜನೆಗೆ ಅನುದಾನ ಕೋರಿ ಸಲ್ಲಿಸಲಾಗಿದ್ದ ಪ್ರಸ್ತಾವನೆಗಳನ್ನು ಪ್ರೊ. ಕೆ. ಎಂ. ಕಾವೇರಿಯಪ್ಪನವರ ಅಧ್ಯಕ್ಷತೆಯ ಉಪಸಮಿತಿಯು ಮೌಲ್ಯ ಮಾಪನ ಮಾಡಿ ಶಿಫಾರಸ್ಸು ಮಾಡಿದ 46 ಪ್ರಸ್ತಾವನೆಗಳಿಗೆ ರೂ. 35,000/-ಗಳ ವರೆಗೆ ಅನುದಾನವನ್ನು ನೀಡಲಾಗಿದೆ.

## 14. ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರದಲ್ಲಿ ಪ್ರೌಢಶಾಲಾ ವಿಜ್ಞಾನ ಕೇಂದ್ರದ ಸ್ಥಾಪನೆ

ಗಿರಿಜನ ವಿದ್ಯಾರ್ಥಿಗಳು ಹೆಚ್ಚಾಗಿರುವ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿರುವ ಚಾಮರಾಜನಗರ ಜಿಲ್ಲೆಯ ಬಿಳಿಗಿರಿರಂಗನ ಬೆಟ್ಟದಲ್ಲಿ ಸ್ವಾಮಿ ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರದ ಪ್ರೌಢಶಾಲೆಯಲ್ಲಿ ಒಂದು ವಿಜ್ಞಾನ ಕೇಂದ್ರವನ್ನು 2013-14ನೇ ಸಾಲಿನಲ್ಲಿ ರೂ. 5.00 ಲಕ್ಷಗಳ ವೆಚ್ಚದಲ್ಲಿ ಸ್ಥಾಪಿಸಲಾಗಿದೆ.

## 15. ಅಕಾಡೆಮಿ ಪ್ರಾದೇಶಿಕ ಸಮ್ಮೇಳನಗಳು

**(1) 2013-14ರಲ್ಲಿ ಅಕಾಡೆಮಿಯು ನಾಲ್ಕು ಪ್ರಾದೇಶಿಕ ಸಮ್ಮೇಳನಗಳನ್ನು ಆಯೋಜಿಸಿದ್ದು, ವಿವರ ಕೆಳಕಂಡಂತಿದೆ:**

**(i) ಅಕಾಡೆಮಿ ಅನುದಾನದಡಿ ಆಯೋಜಿಸಿದ ಸಮ್ಮೇಳನಗಳು :**

| ಕ್ರ. ಸಂ | ಆಯೋಜಕ ಸಂಸ್ಥೆ | ಸಮ್ಮೇಳನದ ಕೇಂದ್ರ ವಿಷಯ | ಆಯೋಜಿಸಿದ ದಿನಾಂಕ |
|---|---|---|---|
| 1 | ಜೆ.ಎಸ್.ಎಸ್. ಕಲೆ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಮೈಸೂರು | ಶಿಕ್ಷಣ ಮತ್ತು ಆರೋಗ್ಯ ಪಾಲನೆಗೆ ವಿಜ್ಞಾನ ಮತ್ತು ತಂತ್ರಜ್ಞಾನ | 20-22 ಫೆಬ್ರವರಿ 2014 |
| 2 | ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಬಾಗಲಕೋಟೆ | ಜೀವನೋಪಾಯ, ಆಹಾರ, ಪೋಷಣೆ ಮತ್ತು ಆರೋಗ್ಯ ಭದ್ರತೆಗಾಗಿ ವಿಜ್ಞಾನ ಮತ್ತು ತಂತ್ರಜ್ಞಾನ | 25-26 ಫೆಬ್ರವರಿ 2014 |

**(ii) ವಿಶೇಷ ಅಭಿವೃದ್ಧಿ ಯೋಜನೆಯಡಿ ಆಯೋಜಿಸಿದ ಸಮ್ಮೇಳನಗಳು :**

| ಕ್ರ. ಸಂ | ಆಯೋಜಕ ಸಂಸ್ಥೆ | ಸಮ್ಮೇಳನದ ಕೇಂದ್ರ ವಿಷಯ | ಆಯೋಜಿಸಿದ ದಿನಾಂಕ |
|---|---|---|---|
| 1 | ರಾಯಚೂರು ವಿಜ್ಞಾನ ಕೇಂದ್ರ ಮತ್ತು ಕೃಷಿ ವಿಶ್ವವಿದ್ಯಾಲಯ, ರಾಯಚೂರು | ನೈಸರ್ಗಿಕ ಸಂಪನ್ಮೂಲಗಳ ಸಮರ್ಪಕ ಬಳಕೆ ಹಾಗೂ ಸುಸ್ಥಿರ ಅಭಿವೃದ್ಧಿಗಾಗಿ ವಿಜ್ಞಾನ ಮತ್ತು ತಂತ್ರಜ್ಞಾನ | 4-5 ಜನವರಿ 2014 |
| 2 | ಕರ್ನಾಟಕ ಕೇಂದ್ರಿಯ ವಿಶ್ವವಿದ್ಯಾನಿಲಯ, ಗುಲ್ಬರ್ಗ | ಅಭಿವೃದ್ಧಿಗಾಗಿ ವಿಜ್ಞಾನ ಮತ್ತು ತಂತ್ರಜ್ಞಾನ | 30-31 ಜನವರಿ 2014 |

## 16. ಪ್ರೌಢಶಾಲೆಗಳಲ್ಲಿ ವಿಜ್ಞಾನ ಕೇಂದ್ರಗಳ ಸ್ಥಾಪನೆ

ಪ್ರೌಢಶಾಲಾ ವಿದ್ಯಾರ್ಥಿಗಳು ವೈಜ್ಞಾನಿಕ ಪರಿಕಲ್ಪನೆಗಳನ್ನು ನೋಡಿ ತಿಳಿ, ಮಾಡಿ ಕಲಿ ಎಂಬಂತೆ ಪ್ರಯೋಗಗಳನ್ನು ತಾವೇ ಮಾಡಿ ಕಲಿಯಲು ಅನುವಾಗುವಂತೆ ಪ್ರಯೋಗ ಪರಿಕರಗಳು ಮತ್ತು ಸಾಧನಸಲಕರಣೆಗಳನ್ನು ಹೊಂದಿದ ಸಣ್ಣ ಸುಸಜ್ಜಿತ ವಿಜ್ಞಾನ ಕೇಂದ್ರಗಳನ್ನು ತಲಾ ರೂ. 10.00 ಲಕ್ಷಗಳ ವೆಚ್ಚದಲ್ಲಿ ಮೆ॥ ಅಗಸ್ತ್ಯ ಅಂತಾರಾಷ್ಟ್ರೀಯ ಪ್ರತಿಷ್ಠಾನದ ಸಹಯೋಗದೊಂದಿಗೆ ಪ್ರಾದೇಶಿಕ ಅಸಮತೋಲನಕ್ಕೆ ಸಂಬಂಧಿಸಿದ ಡಾ. ಡಿ.ಎಂ. ನಂಜುಂಡಪ್ಪ ಸಮಿತಿಯು ಗುರುತಿಸಿರುವ ಕೆಳಕಂಡ 4 ತಾಲ್ಲೂಕುಗಳಲ್ಲಿ ಸ್ಥಾಪಿಸಲಾಗಿದೆ :

| **ಪ್ರಾಂತ್ಯ** | **ಜಿಲ್ಲೆ** | **ತಾಲ್ಲೂಕುಗಳು** | **ವಿಜ್ಞಾನ ಕೇಂದ್ರದ ಸ್ಥಳ** |
|---|---|---|---|
| ಗುಲ್ಬರ್ಗಾ | ಬಳ್ಳಾರಿ | ಸಂಡೂರು | ಸರ್ಕಾರಿ ಬಾಲಕಿಯರ ಪ್ರೌಢಶಾಲೆ. ಪ.ಪೂ. ಕಾಲೇಜ್ ಕ್ಯಾಂಪಸ್, ಸಂಡೂರು |
| | ಯಾದಗಿರಿ | ಯಾದಗಿರಿ | ಸರ್ಕಾರಿ ಪ್ರೌಢಶಾಲೆ. ಪ.ಪೂ. ಕಾಲೇಜ್ ಕ್ಯಾಂಪಸ್, ಯಾದಗಿರಿ |
| | ಬೀದರ್ | ಬಸವಕಲ್ಯಾಣ | ಸರ್ಕಾರಿ ಮಾದರಿ ಪ್ರೌಢಶಾಲೆ, ಬಸವಕಲ್ಯಾಣ |
| ಬೆಂಗಳೂರು | ರಾಮನಗರ | ಕನಕಪುರ | ಸರ್ಕಾರಿ ಪ್ರೌಢಶಾಲೆ, ಕನಕಪುರ |

ಈ ನಾಲ್ಕು ವಿಜ್ಞಾನ ಕೇಂದ್ರಗಳ ಸ್ಥಾಪನೆಗೆ ರೂ. 40.00 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.